ಸ್ನೇಹಿತರಲ್ಲಿಯೂ ಸಂಬಂಧಿಕರಲ್ಲಿ ಮಾತನಾಡುವಾಗ ತಾವಿರುವುದು ಸೀನಿಯರ್ ಸಿಟಿಜನ್ ಹೋಮ್ ಎಂದೋ, ಅಸಿಸ್ಟೆಡ್ ಲೀಸಿಂಗ್ ಸೆಂಟರ್ ಎಂದೋ ಹೇಳಿಕೊಂಡು ತೃಪ್ತಿಪಟ್ಟುಕೊಳ್ಳುತ್ತಿದ್ದರು. ಅಲ್ಲಿರುವ ಎಲ್ಲರೂ ಮಕ್ಕಳಿಂದ ಪರಿತ್ಯಕ್ತರಾದವರಲ್ಲ. ಕೆಲವರ ಮಕ್ಕಳು ವಿದೇಶದಲ್ಲಿದ್ದು ಹೆತ್ತವರನ್ನು ಅಲ್ಲಿ ಕರೆಸಿಕೊಳ್ಳಲು ಸಾಧ್ಯವಾಗದವರು. ಆದರೆ ಹೆತ್ತವರಿಗೆ ಕೈ ತುಂಬಾ ಹಣ ಕಳಿಸಿಕೊಡುತ್ತಿದ್ದರು. ವಿಶೇಷವೆಂದರೆ ಅಲ್ಲಿಯ ಮುಕ್ಕಾಲು ವಾಸಿ ವೃದ್ಧರು, ವೃದ್ಧ ದಂಪತಿಗಳು ತಮ್ಮ ಇಳಿವಯಸ್ಸಿನಲ್ಲಿ ಮಕ್ಕಳಿಗೆ ಭಾರವಾಗಲು ಇಚ್ಛಿಸದೆ ತಮ್ಮ ಮನೆ ಮಠ ಮಾರಿ ಬಂದ ಹಣದಿಂದ ಒಂದು ಕಾಟೇಜನ್ನೋ, ಒಂದು ಕೊಠಡಿಯನ್ನೋ ಖರೀದಿಸಿ ತಮ್ಮ ಉಳಿದ ಜೀವನವನ್ನು ನೆಮ್ಮದಿಯಾಗಿ ಕಳೆಯಲು ಇಚ್ಛಿಸಿ ಬಂದವರು.

ಸುಜಾತಾ ಇಲ್ಲಿ ಬೇಗನೆ ಹೊಂದಿಕೊಂಡಳು. ಅವಳು ಸ್ವಭಾವತಃ ಸ್ನೇಹ ಜೀವಿ. ಎಲ್ಲರೊಡನೆ ಬೇಗನೆ ಬೆರೆತಳು. ಶ್ರೀನಿವಾಸರಾಯರು ಹಾಗೂ ಅವರ ಪತ್ನಿಗೆ ನೆಚ್ಚಿನವಳಾದಳು. ತಮಗೂ ವಯಸ್ಸಾಗುತ್ತಿದೆ, ತಮ್ಮ ನಂತರ ಇದನ್ನೆಲ್ಲ ಯಾರು ನೋಡಿಕೊಳ್ಳುತ್ತಾರೆ ಎಂಬ ಆತಂಕ ಸುಜಾತಾ ಬಂದ ಬಳಿಕ ಸ್ವಲ್ಪಮಟ್ಟಿಗೆ ಪರಿಹಾರ ಕಂಡಂತಾಯಿತು. ಅವರಿಗೆ ಮಕ್ಕಳಿರಲಿಲ್ಲ. ಇಷ್ಟು ದೊಡ್ಡ ಸಂಸ್ಥೆಯನ್ನು ಯಾವುದೇ ಹೆಚ್ಚಿನ ಲಾಭದ ಆಸೆ ಇಲ್ಲದೆ, ನಷ್ಟವೂ ಆಗದಂತೆ ಸರಿದೂಗಿಸಿಕೊಂಡು ಹೋಗುತ್ತಿದ್ದರು.

ಆ ಸಂಸ್ಥೆಗೆ ಒಳ್ಳೆಯ ಹೆಸರಿರುವ ಕಾರಣ ಕಾಟೇಜ್ ಆಗಲೀ, ಕೊಠಡಿಯಾಗಲೀ ಮುಂಗಡ ಬುಕ್ಕಿಂಗ್ ಇಲ್ಲದೆ ಸಿಗುತ್ತಿರಲಿಲ್ಲ. ಆದರೆ ಕೊಠಡಿಗಳಿಗಿಂತ ಸ್ವತಂತ್ರ ಕಾಟೇಜ್‌ಗಳು ದುಬಾರಿಯಾಗಿರುವುದರಿಂದ ಕೇವಲ ಶ್ರೀಮಂತರಿಗಷ್ಟೇ ಲಕ್ಷಾಂತರ ಸುರಿದು ಅದನ್ನು ಪಡೆಯಲು ಸಾಧ್ಯವಾಗುತ್ತಿತ್ತು. ಸುಜಾತಾಳ ಪಕ್ಕದ ಕಾಟೇಜ್ ಕೆಲವು ದಿನಗಳಿಂದ ಖಾಲಿಬಿದ್ದಿತ್ತು. ಅದರಲ್ಲಿದ್ದ ವೃದ್ಧೆಯೊಬ್ಬರು ಪತಿ, ತೀರಿಹೋದ ಕಾರಣ ಅಲ್ಲಿ ಒಬ್ಬರೇ ಇರಲು ಇಚ್ಛಿಸದೆ ಅಲ್ಲಿನ ನಿಯಮದ ಪ್ರಕಾರ ಸಂಸ್ಥೆಗೇ ಅದನ್ನು ಮಾರಿದ್ದರು.

ಅಂದು ಬೆಳಿಗ್ಗೆ ಸುಜಾತಾ ಎದ್ದು ಟೀ ಮಾಡಿ ಹಾಲು ಬೆರಸಿ ಹೊರಗೆ ವರಾಂಡಾಕ್ಕೆ ಬಂದು ಕಪ್ ಹಿಡಿದು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಿರುವಾಗ ಹತ್ತಿರದ ಕಾಟೇಜನ್ನು ಆಳುಗಳು ಶುದ್ಧಗೊಳಿಸುತ್ತಿರುವುದನ್ನು ಕಂಡು ಅತ್ತ ಕಡೆಗೆ ಹೆಜ್ಜೆ ಹಾಕಿದಳು. ಕುತೂಹಲ ಮನುಷ್ಯನ ಸಹಜ ಸ್ವಭಾವ. ಸುಜಾತಾ ಅದಕ್ಕೆ ಹೊರತಲ್ಲ. ಆಳುಗಳಿಂದ ಕೆಲಸ ಮಾಡಿಸುತ್ತಿದ್ದ ಶ್ರೀನಿವಾಸರಾಯರು ಈಕೆಯನ್ನು ನಗುಮುಖದಿಂದ ಸ್ವಾಗತಿಸಿದರು. ಅವರ ಜತೆಯಲ್ಲಿ ತನಗೆ ಬೆನ್ನು ಮಾಡಿ ನಿಂತ ಹೆಚ್ಚು ಕಡಿಮೆ ತನ್ನದೇ ವಯಸ್ಸಿನಾತ ತನ್ನತ್ತ ಮುಖ ತಿರುಗಿಸಿದಾಗ ಸುಜಾತಾ ದಂಗಾದಳು! ಗಾಬರಿ, ಆಶ್ಚರ್ಯದಿಂದ ಆಕೆ ನಿಂತಲ್ಲೇ ನಿಂತಳು.

'ಇವರು ಶಶಿಕಾಂತ್. ಇತ್ತೀಚೆಗೆ ತಾವು ಕೆಲಸ ಮಾಡುತ್ತಿದ್ದ ಕಂಪೆನಿಯಿಂದ ನಿವೃತ್ತಿ ಹೊಂದಿ, ಮಕ್ಕಳಿಬ್ಬರೂ ವಿದೇಶದಲ್ಲಿರುವುದರಿಂದ ಇಲ್ಲಿರಲು ಬಯಸಿ ಬಂದಿದ್ದಾರೆ. ಎರಡು ವರ್ಷಗಳ ಹಿಂದೆಯೇ ಅಡ್ವಾನ್ಸ್ ಬುಕ್ಕಿಂಗ್ ಮಾಡಿದ್ದರು. ಈಗ ಖಾಲಿಯಾದ ತಕ್ಷಣ ಫೋನ್ ಮಾಡಿದೆ. ಮಕ್ಕಳ ಜತೆ ವಿದೇಶದಲ್ಲಿದ್ದ ಕಾರಣ ಈಗಷ್ಟೇ ಬಂದವರು ನೇರವಾಗಿ ಇಲ್ಲಿ ಬಂದುಬಿಟ್ಟರು.'

ಹೀಗೆಂದು ಪರಿಚಯಿಸಿದ ಶ್ರೀನಿವಾಸರಾಯರು ಮತ್ತೆ ಮುಂದುವರಿದು, 'ಈಕೆ ಸುಜಾತಾ. ಕಾಲೇಜಿನಲ್ಲಿ ಪ್ರಾಧ್ಯಾಪಕಿ ಆಗಿದ್ದರು. ಈಗ ಒಂದು ವರುಷದಿಂದ ನಮ್ಮಲ್ಲಿದ್ದಾರೆ. ನನಗಂತೂ ಈಕೆ ಬಲಗೈ ಇದ್ದಂತೆ.'

ಶಶಿಕಾಂತನಿಗೂ ಸುಜಾತಾಳದ್ದೇ ಅವಸ್ಥೆ ಆಗಿತ್ತು. ಆದರೂ ಸೌಜನ್ಯಕ್ಕಾಗಿ 'ಹಲೋ...'